ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಸ್ವಚ್ಛ ಭಾರತ ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ | ಸ್ವಚ್ಛ ಸಂಕೀರ್ಣ | ಸ್ವಚ್ಛಮೇವ ಜಯತೆ SWACHHA MEVA JAYATE | ಜಲೋತ್ಸವ ಮನೆ ಮನೆಗೆ ಗಂಗೆ | ಮನೆ ಮನೆಗೆ ಗಂಗೆ ಜಲ ಜೀವನ್ ಮಿಷನ್

ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಪಟ್ಟ ಸಮಸ್ಯೆಗಳಿದ್ದಲ್ಲಿ ಕರೆ ಮಾಡಿ: 9480985555



# ಸ್ವಚ್ಛತೆಯ ಮೂಲಕ ಚೆನ್ನಯ್ಯ ಕಲ್ಯಾಣಿಯ ಚಿತ್ರಣ ಬದಲಿಸಿದ ಜೆಜೆಎಂ, ಎಸ್.ಬಿ.ಎಂ (ಜಿ)

ಪೂರ್ವಜರು ನಿರ್ಮಿಸಿರುವ ಜಲಮೂಲಗಳ ಹಿಂದೆ ಅದರದ್ದೇ ಆದ ಇತಿಹಾಸವಿದೆ.
ಅದರಲ್ಲಿ ದೇವಸ್ಥಾನದ ಆವರಣದಲ್ಲಿರುವ ಕಲ್ಯಾಣಿಗಳಿಗೆ ಅವುಗಳದ್ದೆ ಆದ ಮಹತ್ವವಿದೆ. ಈ ಕಲ್ಯಾಣಿಗಳು ಕೇವಲ ಜಲಮೂಲವಾಗಷ್ಟೇ ಉಳಿಯದೆ ದೇವತಾ ಕಾರ್ಯಗಳಿಗೂ ಬಳಸುವ ಮೂಲಕ ಆಧ್ಯಾತ್ಮಿಕ ಸಂಬಂಧದ ಜೊತೆ ಗುರುತಿಸಿಕೊಂಡಿದೆ. ಇಂತಹ ಕಲ್ಯಾಣಿಗಳಲ್ಲಿ ನಂದಿ ಗ್ರಾಮದಲ್ಲಿರುವ ಕಲ್ಯಾಣಿಯೂ ಒಂದೂ.

## ನಂದಿ ಗ್ರಾಮದ ಚೆನ್ನಯ್ಯ ಕಲ್ಯಾಣಿಯ ಇತಿಹಾಸ

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲೂಕಿನ ಸುಣ್ಣದಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಂದಿ ಗ್ರಾಮದಲ್ಲಿರುವ ಕಲ್ಯಾಣಿಯನ್ನು ನಿರ್ಮಿಸಿದವರು ವಚನಕಾರ ಬಸವಣ್ಣನವರ ಕಾಲದವರಾದ ನುಲಿಯ ಚೆನ್ನಯ್ಯ. ಹುಲ್ಲನ್ನು ನೂಲುವ ಕಾರ್ಯ ಮಾಡುತ್ತಿದ್ದ ಚೆನ್ನಯ್ಯನವರು ತಮ್ಮ ಕಾಯಕದಿಂದ ಬಂದ ಹಣವನ್ನು ಅನ್ನದಾಸೋಹಕ್ಕಾಗಿ ದಾನ ಮಾಡುತ್ತಿದ್ದರಂತೆ. ಅನ್ನದಾಸೋಹಕ್ಕೆ ಬೇಕಾಗಿದ್ದ ನೀರನ್ನು ಸಂಗ್ರಹಿಸುವ ಸಲುವಾಗಿ ಈ ಕಲ್ಯಾಣಿಯನ್ನು ನಿರ್ಮಿಸಿದ್ದರು ಎಂಬ ಪ್ರತೀತಿಯಿದೆ. ನಂತರದ ದಿನಗಳಲ್ಲಿ ಕಲ್ಯಾಣಿಯ ನೀರನ್ನು ಪೂಜೆಗೂ ಬಳಸಲಾಗುತ್ತಿತ್ತು.

ಕಾಲಕ್ರಮೇಣ ಹಲವಾರು ಕಾರಣಗಳಿಂದ ಚೆನ್ನಯ್ಯ ಕಲ್ಯಾಣಿಯನ್ನು ನಿರ್ಲಕ್ಷ್ಯ ಮಾಡಲಾಯಿತು. ಇದರ ಪರಿಣಾಮವಾಗಿ ಕಲ್ಯಾಣಿಯ ಸುತ್ತ ಕಳೆ ಗಿಡಗಳು ಹೇರಳವಾಗಿ ಬೆಳೆದವು. ಆದರೆ ಜಲ ಜೀವನ್ ಮಿಷನ್ ಹಾಗೂ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಕಲ್ಯಾಣಿಯ ಸುತ್ತ ಮುತ್ತ ಬೆಳೆದಿರುವ ಕಳೆ ಗಿಡಗಳನ್ನು ಸ್ವಚ್ಛಗೊಳಿಸಿ ಕಲ್ಯಾಣಿಗೆ ಪುನಶ್ಚೇತನ ನೀಡುವ ಮಹತ್ವದ ಕಾರ್ಯಕ್ಕೆ ಚಾಲನೆ ನೀಡಲಾಯಿತು.

ಚೆನ್ನಯ್ಯ ಕಲ್ಯಾಣಿಯನ್ನು ಸ್ವಚ್ಛಗೊಳಿಸುವ ಕಾರ್ಯದಲ್ಲಿ ಗ್ರಾಮಸ್ಥರು ಮತ್ತು ಮಹಿಳಾ ಸ್ವಸಹಾಯ ಸಂಘದ ಮಹಿಳೆಯರನ್ನು ಒಟ್ಟುಗೂಡಿಸುವ ಉದ್ದೇಶದಿಂದ ರಂಗೋಲಿ ಸ್ಪರ್ಧೆಯನ್ನು ಏರ್ಪಡಿಸಿ ಕಲ್ಯಾಣಿ ಶ್ರಮದಾನದಲ್ಲಿ ಭಾಗವಹಿಸುವಂತೆ ಮಾಡಲಾಯಿತು. ಈ ವೇಳೆ ಕಲ್ಯಾಣಿ ಇರುವಿಕೆ, ಅವುಗಳ ಸ್ವಚ್ಛತೆ, ಅನುಕೂಲ ಸೇರಿದಂತೆ ಪ್ರಮುಖ ವಿಚಾರಗಳ ಬಗ್ಗೆ ಗ್ರಾಮಸ್ಥರಿಗೆ ಮಾಹಿತಿ ನೀಡಲಾಯಿತು.

ಕಲ್ಯಾಣಿ ಸ್ವಚ್ಛತೆಯಲ್ಲಿ ಕೈಜೋಡಿಸಿದ ಗ್ರಾಮಸ್ಥರು, ಕಲ್ಯಾಣಿ ಸಂಪೂರ್ಣವಾಗಿ ಸ್ವಚ್ಛಗೊಂಡ ನಂತರ ಗಂಗಾ ಪೂಜೆ ನೆರವೇರಿಸಿ ಕಲ್ಯಾಣಿ ಹಾಗೂ ನೀರಿನ ಸಚ್ಛತೆ, ಸಂರಕ್ಷಣೆಯ ಮಾಡುವುದಾಗಿ ಪಣ ತೊಟ್ಟಿದ್ದು ವಿಶೇಷ. ಇನ್ನು ಜೆಜೆಎಂ ಹಾಗೂ ಎಸ್.ಬಿ.ಎಂ(ಗ್ರಾ) ಯೋಜನೆಯಡಿ ಕಲ್ಯಾಣಿ ಸ್ವಚ್ಛಗೊಂಡಿರುವ ಬಗ್ಗೆ ಗ್ರಾಮಸ್ಥರು ಅತೀವ ಸಂತಸ ವ್ಯಕ್ತಪಡಿಸುತ್ತಿದ್ದಾರೆ.

50 ಅಡಿ ಉದ್ದ, 40 ಅಡಿ ಅಗಲ ಮತ್ತು 20 ಅಡಿ ಆಳ ಇರುವ ಕಲ್ಯಾಣಿ ಈಗ ಜಲ ಜೀವನ್ ಮಿಷನ್ ಮತ್ತು ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಪುನಶ್ಚೇತನಗೊಂಡು ಮಳೆ ನೀರಿನಿಂದ ತುಂಬಿ ದೇವತಾ ಕಾರ್ಯಗಳಿಗೆ ನೀರನ್ನು ಪೂರೈಸಲು ಸಿದ್ಧವಾಗಿದೆ. ನಂದಿ ಗ್ರಾಮದಲ್ಲಿರುವ ಚೆನ್ನಯ್ಯ ಕಲ್ಯಾಣಿಯ ಸ್ವಚ್ಛತೆಯ ಹೆಜ್ಜೆ ಉಳಿದ ಗ್ರಾಮಗಳಿಗೂ ಮಾದರಿಯಾಗಿರಲಿ, ಜಲಮೂಲಗಳು ಸ್ವಚ್ಛವಾಗಿರಲಿ ಎಂಬುದೇ ಜಲ ಜೀವನ್ ಮಿಷನ್ ಮತ್ತು ಸ್ವಚ್ಛ ಭಾರತ್ ಮಿಷನ್ ಯೋಜನೆಯ ಆಶಯವಾಗಿದೆ.